**ಸಾಕ್ಷಿಯನ್ನು ದಿಃ 07-08-2023 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು 1 ರಿಂದ 5 ಪ್ರತಿವಾದಿ ಪರ ಶ್ರೀ ಜಿ ಸಿ ಆರ್ ವಕೀಲರಿಂದ**

1) ನಾನು ಅನಕ್ಷರಸ್ಥನಾಗಿರುತ್ತೇನೆ. ನನಗೆ ನನ್ನ ಜನ್ಮ ದಿನಾಂಕ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಅಂದಾಜು ವಯಸ್ಸು ನಮೂದಿಸಿದ್ದೇನೆ, ಅದಕ್ಕೆ ಸಂಬಂಧಿಸಿದಂತೆ ದಾಖಲಾತಿ ಇರುವುದಿಲ್ಲ. ನಾನು ವಾದಿಯರ ತಂದೆಯ ಬಳಿ ದನ ಕಾಯುತ್ತಿದ್ದ ಬಗ್ಗೆ ಹಾಗೂ ಅವರ ಮನೆಯಲ್ಲಿ ಕೆಲಸ ಮಾಡಿದ ಬಗ್ಗೆ ದಾಖಲಾತಿ ಇರುವುದಿಲ್ಲ. ನನಗೆ ಮಹಾಂತಪ್ಪರವರ ಸಹೋದರರು ಹಾಗೂ ದೊಡ್ಡಪ್ಪಂದಿರ ಬಗ್ಗೆ ಮಾಹಿತಿ ಇಲ್ಲ, ಮಹಾಂತಪ್ಪನ ಬಗ್ಗೆ ಮಾತ್ರ ಮಾಹಿತಿ ಇರುತ್ತದೆ. ಸದರಿ ಮಹಾಂತಪ್ಪರವರ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ಬಗ್ಗೆ ಮಹಾಂತಪ್ಪರವರ ಕುಟುಂಬದಲ್ಲಿ ಆದ ವ್ಯವಹಾರಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಮಹಾಂತಪ್ಪ ಹೇಳುತ್ತಿದ್ದರು ಆದರೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ 20 ವರ್ಷಗಳ ಹಿಂದೆ ವಾದಿಯರ ಆಸ್ತಿಗಳನ್ನು ಉಳಿಮೆ ಮಾಡುವುದನ್ನು ಬಿಟ್ಟಿದ್ದೇನೆ ಎಂದು ಬರೆಸಿದ್ದೇನೆ ಎಂದರೆ ಸರಿ. ಹಾಗಾಗಿ ಸದರಿ 20 ವರ್ಷಗಳಿಂದ ವಾದಿಯರ ಕುಟುಂಬದಲ್ಲಿ ಆಗಿರುವ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಯಾರ ಹೆಸರಿನಲ್ಲಿ ಇದ್ದಾವೆ ಹಾಗೂ ಹೆಸರುಗಳು ಯಾವಾಗ ದಾಖಲಾಗಿವೆ ನನಗೆ ಗೊತ್ತಿಲ್ಲ. ನನಗೂ ಹಾಗೂ 1 ನೇ ವಾದಿಗೂ ತುಂಬಾ ಪರಿಚಯ ಇದೆ ಎಂದರೆ ಸರಿ. ನನಗೆ 1 ನೇ ವಾದಿಯ ಮೇಲೆ ಬಹಳ ಪ್ರೀತಿ ವಿಶ್ವಾಸ ಇದೆ ಎಂದರೆ ಸರಿ. ಆದ್ದರಿಂದ 1 ನೇ ವಾದಿಗೆ ಅನಕೂಲವಾಗುವಂತೆ ಸಾಕ್ಷ್ಯ ನುಡಿಯಲು ಬಂದಿದ್ದೀರಿ ಎಂದರೆ ಸಾಕ್ಷಿ ಮಂಜಪ್ಪನ ಆಸ್ತಿ ಇರುವುದಾಗಿ ಸಾಕ್ಷ್ಯ ನುಡಿಯಲು ಬಂದಿದ್ದೇನೆ ಎಂದು ನುಡಿದಿರುತ್ತಾರೆ.

**(12 ಮತ್ತು 13 ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದ ಪತ್ರ ಸಹ ಸಲ್ಲಿಸಿರುವುದಿಲ್ಲ ಆದ್ದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು)**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )
ಓ ಹೇ ಕೆ ಸರಿ ಇದೆ

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್.ಸಿ ಗದಗ**